ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 30 ನೇ ಸೆಪ್ಟೆಂಬರ್, 2020

ಪಹಣಿ ದಾಖಲೆಗಳ ಸಂದರ್ಭದಲ್ಲಿ 11ಇ ನಕ್ಷೆ ಕುರಿತು

ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ(ನಾಮನಿರ್ದೇಶನ ಹೊಂದಿದವರು) –

1056 (1252) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ 11ಇ ನಕ್ಷೆಯನ್ನು ಯಾವ ಯಾವ ಉದ್ದೇಶಗಳಿಗೆ ಬಳಸಲಾಗುತ್ತಿದೆ; 11ಇ ನಕ್ಷೆಯನ್ನು ಪಡೆಯಲು ಅಗತ್ಯವಾದ ದಾಖಲೆಗಳು ಯಾವುವು; 11ಇ ನಕ್ಷೆಯನ್ನು ಪಡೆಯಲು ಅನುಸರಿಸುವ ಕ್ರಮಗಳಾವುವು; (ಆದೇಶದ ಪ್ರತಿಯನ್ನು ಒದಗಿಸುವುದು)

(ಆ) ಯಾವ ಯಾವ ಸಂದರ್ಭದಲ್ಲಿ ಭೂ ಸ್ವಾಧೀನತೆಯ ಮ್ಯೂಟೇಶನ್ ಮಾಡಲು 11ಇ ನಕ್ಷೆಯಿಂದ ವಿನಾಯಿತಿಯನ್ನು ನೀಡಲಾಗಿದೆ; (ಆದೇಶದ ಪ್ರತಿಯನ್ನು ನೀಡುವುದು) ಈ ಕುರಿತು ತಂತ್ರಾಂಶದಲ್ಲಿ ಅಗತ್ಯವಾದ ಮಾರ್ಪಾಡನ್ನು ಮಾಡಲಾಗಿದೆಯೇ;

(ಇ) ರಾಜ್ಯದ ಸಿವಿಲ್ ನ್ಯಾಯಾಲಯದ ಡಿಕ್ರಿ ಆದೇಶದ ಮೂಲಕ ಪಹಣಿ ಮತ್ತು ಖಾತಾ ಮ್ಯೂಟೇಶನ್ ಸಂದರ್ಭದಲ್ಲಿ ನ್ಯಾಯಾಲಯವು ಅನುಮೋದಿಸಿದ ಜಾಗದ ನಕ್ಷೆಯ ಬದಲು ಹೊಸದಾಗಿ 11ಇ ನಕ್ಷೆಯನ್ನು ಕೋರುತ್ತಿರುವುದರಿಂದ ಅರ್ಜಿದಾರರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಅರ್ಜಿದಾರರು ನ್ಯಾಯಾಂಗ ನಿಂದನೆ ಅರ್ಜಿ ದಾಖಲಿಸಿರುವುದರಿಂದ ಸರ್ಕಾರದ ಕ್ರಮವೇನು?